UASB LIBRARY
Jai Kisan
Agri Newspaper Clippings
Tuesday 06-06-2023
Pg. 1

ದ್ವಿದಳ ಧಾನ್ಯದಲ್ಲಿ ಭಾರತ ಆತ್ಮನಿರ್ಭರ

ಕೃಷಿ ಪ್ರಧಾನ ರಾಷ್ಟ್ರವಾದರೂ ಭಾರತ ಖಾದ್ಯ ತೈಲ ಮತ್ತು ದ್ವಿದಳ ಧಾನ್ಯಗಳಿಗಾಗಿ ಬೇರೆ ದೇಶಗಳನ್ನು ಅವಲಂಬಿಸಬೇಕಿತ್ತು. ಆದರಲ್ಲಿಯೂ ಸಸ್ಯಜನ್ಯ ಎಣ್ಣೆಯನ್ನು (ಖಾದ್ಯ ತೈಲ) ವಿದೇಶಗಳಿಂದ ಆಮದು ಮಾಡಿಕೊಳ್ಳುವ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ದ್ವಿದಳ ಧಾನ್ಯಗಳಲ್ಲಿ ದೇಶ ಶೇಕಡ 90ರಷ್ಟು ಆತ್ಮನಿರ್ಭರತೆ ಸಾಧಿಸಿ ದೇಶದ ಕೃಷಿ ವಲಯದಲ್ಲಿ ಹೊಸ ಉತ್ಸಾಹ ಮೂಡಿಸಿದೆ. ಮುಖ್ಯವಾಗಿ ಕೇಂದ್ರದ ಕೃಷಿ ನೀತಿಗಳಿಂದಾಗಿ ಭಾರತ ದ್ವಿದಳ ಧಾನ್ಯ ಆಮದು ನಿಂತುಹೋಗಿದ್ದು, ಬೇಳೆಕಾಳುಗಳ ಉತ್ಪಾದನೆಯಲ್ಲಿ ದೇಶ ಸ್ವಾವಲಂಬನೆ ಸಾಧಿಸಿರುವ ಬಗ್ಗೆ ಮಾಹಿತಿ ಇಲ್ಲಿದೆ.

ಆಮದಿನಲ್ಲಿ ಗಣನೀಯ ಇಳಿಕೆ

ಈ ಹಿಂದೆ ದೇಶ ತನಗೆ ಅಗತ್ಯವಿರುವ ದ್ವಿದಳ ಧಾನ್ಯಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿತ್ತು. ನರೇಂದ್ರ ಮೋದಿ ನೇತೃತ್ವದ ಸರ್ಕಾರದ 9 ವರ್ಷಗಳ ಅವಧಿಯಲ್ಲಿ ದ್ವಿದಳ ಧಾನ್ಯಗಳ ಆಮದು ಪ್ರಮಾಣ ಇಳಿಸಲು ಸಾಕಷ್ಟು ಒತ್ತು ನೀಡಿದೆ. 2013-14ರಲ್ಲಿ ಭಾರತದ ಬೇಳೆ ಕಾಳುಗಳ ಆಮದು 3.18 ದಶಲಕ್ಷ ಟನ್‌ಗಳಿದ್ದುದು 2016-17ರ ಹೊತ್ತಿಗೆ 6.61 ದಶಲಕ್ಷ ಟನ್‌ಗಳಿಗೆ ಏರಿಕೆಯಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಮೋದಿ ಸರ್ಕಾರ ಬೇಳೆಕಾಳುಗಳ ಉತ್ಪಾದನೆ ಹೆಚ್ಚಿಸಲು ಗಮನ ನೀಡಿತು. ಪರಿಣಾಮ 2021-22 ರಲ್ಲಿ 2.70 ದಶಲಕ್ಷ ಟನ್‌ಗಳಿಂದ 2022-23 ರಲ್ಲಿ 2.52 ದಶಲಕ್ಷ ಟನ್‌ಗಳಿಗೆ ಆಮದು ಪ್ರಮಾಣ ಗಣನೀಯವಾಗಿ ಇಳಿಕೆಯಾಗಿದ್ದು, ದೇಶ ದ್ವಿದಳ ಧಾನ್ಯ ಉತ್ಪಾದನೆಯಲ್ಲಿ ಆತ್ಮನಿರ್ಭರತೆ ಸಾಧಿಸಿದೆ.

ಉತ್ಪಾದನೆಯಲ್ಲಿ ಏರಿಕೆ

ದೇಶದಲ್ಲಿ ದ್ವಿದಳ ಧಾನ್ಯಗಳ ಉತ್ಪಾದನೆ ಹೆಚ್ಚಾಗಿರುವುದರಿಂದ ಆಮದು ಕಡಿತವಾಗಲು ಮೂಲ ಕಾರಣವಾಗಿದೆ. ಕೃಷಿ ಸಚಿವಾಲಯದ ಪ್ರಕಾರ, ಭಾರತದ ದ್ವಿದಳ ಧಾನ್ಯಗಳ ಉತ್ಪಾದನೆ 2013-14 ರಲ್ಲಿ 19.26 ದಶಲಕ್ಷ ಟನ್‌ಗಳಿಂದ 2022-23 ರಲ್ಲಿ 27.50 ದಶಲಕ್ಷ ಟನ್‌ಗಳಿಗೆ ಹೆಚ್ಚಾಗಿದೆ. ಇದೇ ವೇಳೆ ಖಾಸಗಿ ವ್ಯಾಪಾರ ಅಂದಾಜುಗಳ ಪ್ರಕಾರ, ಉತ್ಪಾದನೆ 23-24 ಟನ್‌ಗೆ ಇಳಿದಿದೆ. ಆದರೂ 23 ದಶಲಕ್ಷ ಟನ್ ಉತ್ಪಾದನೆ ಮತ್ತು 2.5 ದಶಲಕ್ಷ ಟನ್ ಆಮದುಗಳ ಪ್ರಮಾಣವನ್ನು ಪರಿಗಣಿಸಿದರೆ ದ್ವಿದಳ ಧಾನ್ಯಗಳು ಮತ್ತು ಖಾದ್ಯ ತೈಲಗಳ ಉತ್ಪಾದನೆ ಹಾಗೂ ಆಮದು ಹೋಲಿಸಿದಾಗ ಬೇಳೆಕಾಳುಗಳಲ್ಲಿ ಶೇ. 90ಕ್ಕಿಂತ ಹೆಚ್ಚಿನ ಸ್ವಾವಲಂಬನೆಯನ್ನು ಸಾಧಿಸಲಾಗಿದೆ.

ಆತ್ಮನಿರ್ಭರತೆಗೆ ಕಾರಣವಾದ ನೀತಿಗಳು

ದೇಶ ದ್ವಿದಳ ಧಾನ್ಯಗಳಲ್ಲಿ ಸ್ವಾವಲಂಬನೆ ಸಾಧಿಸಲು ಕೇಂದ್ರ ರೈತರಿಗೆ ನೀಡಿದ ಪ್ರೋತ್ಸಾಹ ಸಕಾರಾತ್ಮಕವಾಗಿ ಸ್ಪಂದನೆ ದೊರಕಿತು. ಪ್ರೋತ್ಸಾಹಧನ ನೀಡುವ ಮೂಲಕ ಬೇಳೆಕಾಳು ಬೆಳೆಯುವ ಪ್ರದೇಶವನ್ನು ಹೆಚ್ಚಿಸಲಾಯಿತು. ವಿಶೇಷವಾಗಿ ರಬಿ ಋತುವಿನಲ್ಲಿ, ಬೇಳೆಕಾಳುಗಳ ಪ್ರದೇಶ ಹೆಚ್ಚಾಯಿತು. ಇದರಿಂದಾಗಿ ಬಟಾಣಿ ಮತ್ತು ಕಡಲೆ ಉತ್ಪಾದನೆಯಲ್ಲಿ ಏರಿಕೆ ಕಂಡುಬಂದಿತು. ಇದೇ ವೇಳೆ ಈ ಬೇಳೆಕಾಳುಗಳ ಮೇಲಿನ ಆಮದು ಸುಂಕವನ್ನು ಹೆಚ್ಚಿಸುವ ಮೂಲಕ ಸರ್ಕಾರ ವಿದೇಶದಿಂದ ಬರುತ್ತಿದ್ದ ಬೇಳೆಕಾಳುಗಳನ್ನು ನಿಯಂತ್ರಿಸುವಂತಾಯಿತು. ಬೇಳೆಕಾಳುಗಳ ಆಮದು ನಿಲ್ಲಿಸಲು ಕೇಂದ್ರ ಕೈಗೊಂಡ ಎರಡನೆ ಮಹತ್ವದ ನೀತಿಯೆಂದರೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಏರಿಕೆ ಮಾಡಿದ್ದು. ಇದರಿಂದ ರೈತರ ಗಳಿಕೆ ಹಂತಹಂತವಾಗಿ ಹೆಚ್ಚಾಗ ತೊಡಗಿತು. ಪ್ರೋತ್ಸಾಹಧನ, ಆಮದು ಸುಂಕ ಹೆಚ್ಚಳ ಮತ್ತು ಕನಿಷ್ಠ ಬೆಂಬಲ ಬೆಲೆಯಂತಹ ನೀತಿ ಗಳು ಬೇಳೆಕಾಳುಗಳ ಉತ್ಪಾದನೆಯಲ್ಲಿ ದೇಶ ಆತ್ಮನಿರ್ಭರತೆ ಸಾಧಿಸಲು ಸಹಕಾರಿಯಾಯಿತು.



1951.97
ದಶಲಕ್ಷ ಟನ್
2014-15ರಲ್ಲಿ
ಬಟಾಣಿ ಆಮದು

418.88
ದಶಲಕ್ಷ ಟನ್
2014-15ರಲ್ಲಿ ಕಡಲೆ
ಆಮದು

0.86
ದಶಲಕ್ಷ ಟನ್
2022-23ರಲ್ಲಿ
ಬಟಾಣಿ ಆಮದು

62.92
ದಶಲಕ್ಷ ಟನ್
2022-23ರಲ್ಲಿ
ಬಟಾಣಿ ಆಮದು

ಫಲ ನೀಡಿದ ಕೇಂದ್ರದ ಪ್ರೋತ್ಸಾಹ

ರಷ್ಯಾ-ಉಕ್ರೇನ್ ಯುದ್ಧದ ನಂತರ, ಬಟಾಣಿ ಆಮದು ದುಬಾರಿಯಾಗ ತೊಡಗಿತು. ಮತ್ತೊಂದೆಡೆ, ಕೇಂದ್ರ ದ್ವಿದಳ ಧಾನ್ಯಗಳ ಉತ್ಪಾದನೆಗೆ ನೀಡಿದ ಪ್ರೋತ್ಸಾಹ ದೇಶದಲ್ಲಿ ಫಲ ನೀಡಲಾರಂಭಿಸಿತು. ಇದರಿಂದಾಗಿ ಕಾಳುಗಳ ಉತ್ಪಾದನೆಯಲ್ಲಿ ತೀವ್ರ ಏರಿಕೆ ಕಂಡುಬಂದಿದೆ. ಒಂದೆಡೆ, ವಿಶ್ವ ಮಾರುಕಟ್ಟೆಯಲ್ಲಿ ಹಣದುಬ್ಬರ ಸ್ಥಳೀಯ ವ್ಯಾಪಾರಿಗಳನ್ನು ಕಂಗಾಲಾಗಿಸಿದರೆ ಮತ್ತೊಂದೆಡೆ, ಹೆಚ್ಚಿದ ಕಾಳು ಉತ್ಪಾದನೆಯು ಆಮದನ್ನು ನಿಲ್ಲಿಸಲು ಸಹಾಯ ಮಾಡಿತು.

ಕೇಂದ್ರದ ಕೃಷಿ ನೀತಿಗಳಿಂದಾಗಿ ಬೇಳೆಕಾಳುಗಳ ಉತ್ಪಾದನೆಯಲ್ಲಿ ದೇಶ ಸ್ವಾವಲಂಬನೆ

ಬಟಾಣಿ, ಕಡಲೆಕಾಳುಗಳಲ್ಲಿ ಸುಧಾರಣೆ

ಭಾರತದ ಪ್ರಮುಖ ಬೇಳೆಕಾಳುಗಳಾದ ಹಳದಿ/ಬಿಳಿ ಬಟಾಣಿ ಮತ್ತು ಕಡಲೆಯ ಆಮದು ಪ್ರಮಾಣ ಗಣನೀಯವಾಗಿ ಕುಸಿತವಾಗಿದೆ. ಈ ಹಿಂದೆ ವಾರ್ಷಿಕ 3 ದಶಲಕ್ಷ ಟನ್‌ಗಳಷ್ಟಿದ್ದ ಇವುಗಳ ಆಮದು ಪ್ರಮಾಣ ಈಗ ಒಂದು ದಶಲಕ್ಷ ಟನ್‌ಗೆ ಇಳಿಕೆಯಾಗಿದೆ. ಬಟಾಣಿಯನ್ನು ಹೆಚ್ಚಾಗಿ ಕೆನಡಾ, ರಷ್ಯಾ, ಉಕ್ರೇನ್ ಮತ್ತು ಲಿಥುವೇನಿಯಾದಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು. ಭಾರತೀಯ ಆಹಾರ ಪದಾರ್ಥಗಳಲ್ಲಿ ಕಡಲೆಕಾಳನ್ನು ಹೆಚ್ಚು ಬಳಸಲಾಗುತ್ತದೆ. ಹೀಗಿರುವಾಗ 2013-14ರಲ್ಲಿ 9.53 ದಶಲಕ್ಷ ಟನ್‌ನಿಂದ 7.33 ದಶಲಕ್ಷ ಟನ್‌ಗೆ ಹಾಗೂ ಮುಂದಿನ ಎರಡು ವರ್ಷಗಳಲ್ಲಿ ದೇಶದಲ್ಲಿ ಕಡಲೆ ಕಾಳುಗಳ ಇಳುವರಿ 7.06 ದಶಲಕ್ಷ ಟನ್‌ಗೆ ಇಳಿಕೆಯಾದ್ದರಿಂದ ಕಡಲೆಕಾಳುಗಳ ಬೆಲೆ ಗಗನಕ್ಕೇರಿತು. ಆ ಅವಧಿಯಲ್ಲಿ ಆಸ್ಟ್ರೇಲಿಯಾ ಮತ್ತು ರಷ್ಯಾದಿಂದ ಕಡಲೆ ಆಮದು ಕೂಡ ಹೆಚ್ಚಾಯಿತು. 2016-17ರ ನಂತರ ಪರಿಸ್ಥಿತಿ ಬದಲಾಯಿತು, ಕಡಲೆಕಾಳನ ದೇಶೀಯ ಉತ್ಪಾದನೆ 2017-18ರಲ್ಲಿ 11.38 ದಶಲಕ್ಷ ಟನ್‌ಗೆ 2021-22 ಮತ್ತು 2022-23ರಲ್ಲಿ ತಲಾ 13.54 ದಶಲಕ್ಷ ಟನ್‌ಗೆ ಜಿಗಿತ ದಾಖಲಿಸಿದೆ. ಮೋದಿ ಸರ್ಕಾರದ ಆರಂಭಿಕ ವರ್ಷಗಳಲ್ಲಿ ಬೇಳೆ ಕಾಳುಗಳ ಉತ್ಪಾದನೆ ಪ್ರಮಾಣ 9 ವರ್ಷಗಳಲ್ಲಿ ಗಣನೀಯ ಸುಧಾರಣೆಯಾಗಿದೆ.



06-06-2023
Hosadiganta Pg 06

For more information visit
University Library Website
Web - uasbagrilibindia.org
E-mail- librarian@uasbangalore.edu.in

ಪೂರ್ವ ಮುಂಗಾರು ಚೆನ್ನಾಗಿ ಸುರಿದರೂ ಬಿತ್ತನೆ ಕುಂಠಿತ

ರಾಜ್ಯದಲ್ಲಿ 2.95 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ | 2.48 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿ ಶೇ.84 ಮಾತ್ರ ಸಾಧನೆ
ಈ ಬಾರಿ ತುಮಕೂರು, ಚಿತ್ರದುರ್ಗ, ಚಾ.ನಗರದಲ್ಲಿ ನಿರೀಕ್ಷೆಗೂ ಅಧಿಕ ಬಿತ್ತನೆ | ದ್ವಿದಳ ಧಾನ್ಯದಲ್ಲಿ ಗುರಿ ಮೀರಿದ ಸಾಧನೆ

• ಸಿದ್ದು ಚಿಕ್ಕಬಳ್ಳೇಕೆರೆ
ಕನ್ನಡಪ್ರಭ ವಾರ್ತೆ ಬೆಂಗಳೂರು

2023-24ನೇ ಸಾಲಿನ ಪೂರ್ವ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ನಿರೀಕ್ಷೆಗಿಂತಲೂ ಬಿತ್ತನೆ ಕುಂಠಿತವಾಗಿದೆ. 2.95 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿತ್ತಾದರೂ, 2.48 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆಯಾಗಿ ಶೇ.84ರಷ್ಟು ಗುರಿ ಸಾಧನೆಯಾಗಿದೆ.

ಮಾ.1ರಿಂದ ಮೇ 31 ರವರೆಗಿನ ಮುಂಗಾರು ಹಂಗಾಮಿನ ಅವಧಿಯಲ್ಲಿ ನೀರಾವರಿ ಪ್ರದೇಶದಲ್ಲಿ 25 ಸಾವಿರ ಹೆಕ್ಟೇರ್ ಹಾಗೂ ಮಳೆಯಾಶ್ರಿತದಲ್ಲಿ 2.23 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ ಇತ್ತು. ಈ ಅವಧಿಯಲ್ಲಿ ಸಾಮಾನ್ಯವಾಗಿ 115 ಮಿ.ಮೀ. ಮಳೆ ನಿರೀಕ್ಷಿಸಲಾಗಿತ್ತಾದರೂ 116 ಮಿ.ಮೀ. ಮಳೆಯಾಗಿದೆ. ಮಳೆಯ ನಿರೀಕ್ಷಿತ ಪ್ರಮಾಣ ಶೇ.1ರಷ್ಟು ಹೆಚ್ಚಾಗಿದ್ದರೂ ಸಕಾಲಕ್ಕೆ ಬರದಿದ್ದರಿಂದ ಬಿತ್ತನೆಗೆ ಹಿನ್ನಡೆಯಾಗಿದೆ.



ತುಮಕೂರು ಜಿಲ್ಲೆಯಲ್ಲಿ ನಿರೀಕ್ಷೆಗೂ ಮೀರಿ (ಶೇ.384) ಭಾರೀ ಪ್ರಮಾಣದಲ್ಲಿ ಬಿತ್ತನೆ ಮಾಡಲಾಗಿದೆ. ಚಿತ್ರದುರ್ಗ (ಶೇ.148), ಚಾಮರಾಜನಗರ (ಶೇ.113) ಜಿಲ್ಲೆಯಲ್ಲೂ ಉತ್ತಮ ಬಿತ್ತನೆಯಾಗಿದೆ. ಹಾಸನ (ಶೇ.90), ಮೈಸೂರು (ಶೇ.77), ಮಂಡ್ಯ (ಶೇ.72), ರಾಮನಗರ (ಶೇ.69), ಕೊಪ್ಪಳ ಜಿಲ್ಲೆಯಲ್ಲಿ (ಶೇ.66) ಬಿತ್ತನೆ ಅಷ್ಟೇನೂ ಆಶಾದಾಯಕವಾಗಿಲ್ಲ. ಇನ್ನುಳಿದಂತೆ ಕೆಲ ಜಿಲ್ಲೆಗಳಲ್ಲಿ ಮಳೆಯ ಕೊರತೆಯಿಂದ ಬಿತ್ತನೆ ಸಾಕಷ್ಟು ಕಡಿಮೆಯಾಗಿದೆ.

ಏಪ್ರಿಲ್ ತಿಂಗಳಿನಲ್ಲಿ ರಾಜ್ಯದ ಒಟ್ಟಾರೆ ಮಳೆಯ ಪ್ರಮಾಣ ಶೇ.14ರಷ್ಟು ಕಡಿಮೆಯಾಗಿದ್ದರಿಂದ ಬಿತ್ತನೆ ತಡವಾಗಿ ಆರಂಭವಾಗಿದೆ. ಮೇ ತಿಂಗಳಿನಲ್ಲಿ ಸುರಿದ ಮಳೆಗೂ ರೈತರು ಬಿತ್ತನೆ ಮಾಡಿದ್ದು, ಇದು ಮುಂಗಾರು ಹಂಗಾಮಿನ ಲೆಕ್ಕಕ್ಕೆ ಬರಲಿದೆ.
• **ಜೆ.ಟಿ.ಪುತ್ರ** ಕೃಷಿ ಇಲಾಖೆ ನಿರ್ದೇಶಕ

ಮುಂಗಾರಿಗೆ ಸಕಲ ಸಿದ್ಧತೆ

ಮುಂಗಾರು ಹಂಗಾಮಿಗೆ ಕೃಷಿ ಇಲಾಖೆ ಸಕಲ ಸಿದ್ಧತೆ ಮಾಡಿಕೊಂಡಿದೆ. 85.35 ಲಕ್ಷ ಹೆಕ್ಟೇರ್ ನಲ್ಲಿ ಬಿತ್ತನೆ ಗುರಿ ಹೊಂದಿದ್ದು, ಜೂ.3 ರವರೆಗೂ 4.18 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. 5.55 ಲಕ್ಷ ಕ್ವಿಂಟಲ್ ಪ್ರಮಾಣೀತ ಬಿತ್ತನೆ ಬೀಜಗಳ ಅವಶ್ಯಕತೆಯಿದ್ದು, 13,090 ಕ್ವಿಂಟಲ್ ಮಾರಾಟವಾಗಿ, ಇನ್ನುಳಿದ ಬೀಜ ಸಾಕಷ್ಟು ದಾಸ್ತಾನಿದೆ. 25.47 ಲಕ್ಷ ಮೆಟ್ರಿಕ್ ಟನ್ ವಿವಿಧ ರಾಸಾಯನಿಕ ರಸಗೊಬ್ಬರ ಬೇಡಿಕೆ ಇದ್ದು, ಈಗಾಗಲೇ 5.62 ಲಕ್ಷ ಮೆಟ್ರಿಕ್ ಟನ್ ಮಾರಾಟವಾಗಿದೆ. 14.11 ಲಕ್ಷ ಮೆಟ್ರಿಕ್ ಟನ್ ಉಳಿಕೆ ದಾಸ್ತಾನು ಇದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

ದ್ವಿದಳ ಧಾನ್ಯ ಬಿತ್ತನೆ ಹೆಚ್ಚಳ: ತೊಗರಿ, ಕಡಲೆ, ಈರುಳ್ಳಿ, ಉದ್ದು, ಹೆಸರು, ಅಲಸಂದೆ, ಅವರೆ ಸೇರಿದಂತೆ ದ್ವಿದಳ ಧಾನ್ಯಗಳಲ್ಲಿ ಗುರಿ ಮೀರಿ ಸಾಧನೆಯಾಗಿದೆ. ಆದರಲ್ಲೂ 5 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಹೆಸರುಬೇಳೆ ಬೆಳೆಯುವ ಗುರಿ ಇತ್ತಾದರೂ 19 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದು ಶೇ.388ರಷ್ಟು ಸಾಧನೆಯಾಗಿದೆ. 12 ಸಾವಿರ ಹೆಕ್ಟೇರ್‌ನಲ್ಲಿ ಉದ್ದು ಬಿತ್ತನೆ ಗುರಿಯಿದ್ದು, 11 ಸಾವಿರ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿ ಶೇ.90ರಷ್ಟು ಸಾಧನೆಯಾಗಿದೆ.

06-06-2023
Kanadaprabha Pg 12

06-06-2023
Hosaadiganta Pg 06

ಇನ್ಮುಂದೆ ಟ್ರ್ಯಾಕ್ಟರ್ ಸಹ ಗೋಬರ್ ಗ್ಯಾಸ್‌ನಿಂದ ಓಡಲಿದೆ



ಧರಣಿ ಮಂಡಲ
• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com

ಒಂದು ಅಂದಾಜಿನಂತೆ ವಿಶ್ವದಲ್ಲಿ ಪ್ರತಿವರ್ಷ ಸುಮಾರು ಶೇಕಡಾ 18ರಷ್ಟು ಹೊಸರು ಮನೆ ಅನಿಲ ಜಾನುವಾರುಗಳಿಂದಲೇ ಉತ್ಪಾದನೆಯಾಗುತ್ತಿದೆ. ಹೀಗಾಗಿ ಇಂದು ಕೃಷಿ ಮತ್ತು ಹೈನೋದ್ಯಮವು ಜಾಗತಿಕ ತಾಪಮಾನಕ್ಕೆ ಹೆಚ್ಚಿನ ಕೊಡುಗೆಯನ್ನು ನೀಡುತ್ತಿದೆ. ಕೃಷಿಯಲ್ಲಿ ಬಳಸಲಾಗುತ್ತಿರುವ ಹೆವಿ ಡ್ಯೂಟಿ ಯಂತ್ರಗಳು ಮತ್ತು ಉಪಕರಣಗಳು ಹೆಚ್ಚಿನ ಪ್ರಮಾಣದ ನೈಟ್ರಸ್ ಆಕ್ಸೈಡ್ ಮತ್ತು ಇಂಗಾಲದ ಡೈ ಆಕ್ಸೈಡ್‌ನ್ನು ಹೊರಸೂಸುತ್ತಿವೆ. ಇನ್ನು ಮಿಥೇನ್ ಇಂಗಾಲದ 80 ಪಟ್ಟು ಹೆಚ್ಚು ಜಾಗತಿಕ ತಾಪಮಾನಕ್ಕೆ ಕೊಡುಗೆಯನ್ನು ನೀಡುತ್ತಿದೆ. ಕೋವಿಡ್-19 ಲಾಕ್‌ಡೌನ್‌ನ ಸಂದರ್ಭದಲ್ಲಿ ಕಾರ್ಬನ್ ಡೈ ಆಕ್ಸೈಡ್ ಭಾಗಶಃ ತಟಸ್ಥವಾಗಿದ್ದಾಗಲೂ ಮಿಥೇನ್ ಹಸಿರುಮನೆ ಅನಿಲದ ಹೊರಸೂಸುವಿಕೆಯಲ್ಲಿ ಶೇಕಡಾ 20ರಷ್ಟು ಏರಿಕೆಯನ್ನು ಕಂಡಿತ್ತು. ದೊಡ್ಡ ಡೇರಿ ಫಾರ್ಮ್‌ಗಳಿಗಿಂತ ಸಣ್ಣ ಮತ್ತು ಮಧ್ಯಮ ಗಾತ್ರದ ಡೇರಿ ಫಾರ್ಮ್‌ಗಳು ತಾವು ಬಳಸುವುದಕ್ಕಿಂತ ಹೆಚ್ಚಿನ ಮೀಥೇನ್‌ನ್ನು ಉತ್ಪಾದಿಸುತ್ತಿರುವುದು ಗೋಚರಿಸಿತ್ತು.

ನಮ್ಮಲ್ಲಿ ಬಹಳ ಹಿಂದಿನಿಂದಲೂ ಸಗಣಿಯಿಂದ ಅನಿಲ ಉತ್ಪಾದನೆಯನ್ನು ಮಾಡಲಾಗುತ್ತಿದೆ. ಅದರ ಮುಂದುವರಿದ ತಂತ್ರಜ್ಞಾನವಾಗಿ ಇದನ್ನು ವಾಹನಗಳಿಗೂ ಅಳವಡಿಸುವ ಕಾರ್ಯ ನಡೆದಿದೆ. ಅದರಂತೆ ವಿದೇಶಗಳಲ್ಲಿರುವ ಅನೇಕ ಡೇರಿ ಕೇಂದ್ರಗಳಲ್ಲಿ ಉತ್ಪಾದನೆಯಾಗುವ ಮಿಥೇನ್ ಅನಿಲವನ್ನು ವಿದ್ಯುತ್ ಉತ್ಪಾದನೆಗೂ ಬಳಸಲಾಗುತ್ತಿದೆ. ನಮ್ಮಲ್ಲಿನ್ನೂ ಅಂತಹ ತಂತ್ರಜ್ಞಾನ ಸಾಕಷ್ಟು ಅಭಿವೃದ್ಧಿಯಾಗಿಲ್ಲ. ಕೆಲ ವರ್ಷಗಳ ಹಿಂದೆ ಇಂಗ್ಲೆಂಡ್‌ನಲ್ಲಿ ಸಗಣಿಯನ್ನು ಬಳಸಿ ವೋಕ್ಸ್‌ವ್ಯಾಗನ್ ಬೀಟಲ್ ಕಾರೊಂದನ್ನು ಓಡಿಸುವ ಪ್ರಯೋಗ ನಡೆದಿದ್ದು ದೊಡ್ಡ ಸುದ್ದಿಯಾಗಿತ್ತು. ಇತ್ತೀಚೆಗೆ ಇಂತಹದ್ದೇ ಮತ್ತೊಂದು ಪ್ರಯೋಗ ಯಶಸ್ವಿಯಾಗಿದೆ. ಸಗಣಿಯಿಂದ ಸಂಪೂರ್ಣವಾಗಿ ಚಲಿಸುವಮೊದಲ ಟ್ರ್ಯಾಕ್ಟರ್‌ನ್ನು ಬ್ರಿಟಿಷ್ ಕಂಪನಿಯೊಂದು ಅಭಿವೃದ್ಧಿಪಡಿಸಿದೆ. ಈ 270 ಬಿಹೆಚ್‌ಪಿ ಟ್ರ್ಯಾಕ್ಟರ್ ಹಸುವಿನ ಸಗಣಿಯಿಂದ ಉತ್ಪತ್ತಿಯಾಗುವ ಇಂಧನದಿಂದಲೇ ಚಲಿಸುತ್ತದೆ.

ಹಸುವಿನ ಸಗಣಿ ಸಾಂಪ್ರದಾಯಿಕವಾಗಿ ಅದರಲ್ಲಿನ ಸಾವಯವ ಅಂಶದಿಂದಾಗಿ ದಶಕಗಳಿಂದ ಬೆಳೆ ಗೊಬ್ಬರವಾಗಿ ಬಳಸಲ್ಪಡುತ್ತಿದೆ. ಆದರೆ ಈಗ ಬ್ರಿಟನ್ನಿನ ಕಂಪನಿಯೊಂದು ಹಸುವಿನ ಸಗಣಿಯಿಂದ ಚಲಿಸುವ ನ್ಯೂ ಹಾಲೆಂಡ್ ಟಿ7 ಎಂಬ ಟ್ರ್ಯಾಕ್ಟರ್‌ನ್ನು ಅವಿಷ್ಕರಿಸಿದೆ. ಇದು ಕೃಷಿಯಲ್ಲಿ ಹಸಿರು ಕ್ರಾಂತಿಯನ್ನೇ ಉಂಟುಮಾಡಲಿದೆ ಎಂದೇ ಹೇಳಲಾಗಿದೆ. ಮಾಲಿನ್ಯಕ್ಕೆ ಹಾನಿಕಾರಕವಾದ ಸಂಪೂರ್ಣ ನೈಸರ್ಗಿಕ ಮತ್ತು ಸಾವಯವ ಕೊಳೆಯುವಿಕೆಯ ಉಪ ಉತ್ಪನ್ನವಾದ ಮಿಥೇನ್‌ನಿಂದ ಚಲಿಸುವ ವಿಶ್ವದ ಮೊದಲ ಟ್ರ್ಯಾಕ್ಟರ್ ಎಂಬ ಹೆಗ್ಗಳಿಕೆ ಇದರದ್ದು. ಸಂಪೂರ್ಣವಾಗಿ ಹಸುವಿನ ಗೊಬ್ಬರದ ಮೇಲೆ ಚಲಿಸುವ ಈ ಟ್ರ್ಯಾಕ್ಟರ್‌ಗೆ ಇಂಧನವಾಗಿ ದ್ರವೀಕೃತ ಮಿಥೇನ್ ಕಾರ್ಯನಿರ್ವಹಿಸುತ್ತದೆ.

ಹಸುಗಳಿಂದ ಸಿಗುವ ತ್ಯಾಜ್ಯ ಉಪ ಉತ್ಪನ್ನಗಳನ್ನು ಬಯೋ ಮಿಥೇನ್ ಶೇಖರಣಾ ಘಟಕಕ್ಕೆ ಸಂಗ್ರಹಿಸುವ ಮೂಲಕ ಇದು ಕಾರ್ಯನಿರ್ವಹಿಸುತ್ತದೆ. ಹಸುವಿನ ತ್ಯಾಜ್ಯ ಉತ್ಪನ್ನವು ಫ್ಯುಜಿಟಿವ್ ಮಿಥೇನ್ ಎಂದು ಕರೆಯಲ್ಪಡುವ ಅನಿಲವನ್ನು ಬಿಡುಗಡೆ ಮಾಡುತ್ತದೆ. ನಂತರ ಅದನ್ನು ಸಂಸ್ಕರಿಸಿ ಸಂಕುಚಿತಗೊಳಿಸಲಾಗುತ್ತದೆ ಹಾಗೂ ಸಂಸ್ಕರಣಾ ಘಟಕವನ್ನು ಬಳಸಿಕೊಂಡು ಪರಿಸರ ಸ್ನೇಹಿಯಾದ ಕಡಿಮೆ ಹೊರಸೂಸುವಿಕೆ ಇಂಧನವಾಗಿ ಪರಿವರ್ತಿಸಲಾಗುತ್ತದೆ. ಹೀಗೆ ಸುಮಾರು 21 ಸಾವಿರ ಪೌಂಡ್ ತೂಕವನ್ನು ಹೊಂದಿರುವ ಇದು ಗೊಬ್ಬರದಿಂದ ತಯಾರಿಸಲಾದ ಇಂಧನದಿಂದ ಚಲಿಸುತ್ತದೆ. ಇದರಲ್ಲಿ ಅಳವಡಿಸಲಾಗಿರುವ ಕ್ರಯೋಜನಿಕ್ ಟ್ಯಾಂಕ್ ದ್ರವ ರೂಪದಲ್ಲಿ ಮಿಥೇನ್‌ನ್ನು ಮೈನಸ್ 162 ಡಿಗ್ರಿಗಳಲ್ಲಿ ಇರಿಸುತ್ತ ಟ್ರ್ಯಾಕ್ಟರ್‌ಗೆ ಗಮನಾರ್ಹವಾದ ಶಕ್ತಿ ಮತ್ತು ವಾತಾವರಣದಲ್ಲಿ ಹೊಗೆ ಬಿಡುಗಡೆಯಾಗದಂತೆ ಮಾಡುತ್ತದೆ. ಇದಲ್ಲದೆ ನಾನ್ ವೆಂಟಿಂಗ್ ಕ್ರಯೋಜೆನಿಕ್ ಶೇಖರಣಾ ತೊಟ್ಟಿಯನ್ನು ಬಳಸಿಕೊಂಡು ಡೀಸೆಲ್‌ನಂತೆಯೇ ಮಿಥೇನ್‌ನ್ನು ಸಾಗಿಸಬಹುದಾಗಿದೆ. ಹೀಗೆ ಸೆರೆ ಹಿಡಿಯಲಾದ ಅನಿಲವು ಉಳಿದ ವಸ್ತುಗಳನ್ನು ತಂಪಾಗಿಸಲು ಬಳಸಬಹುದು. ಮಿಥೇನ್ ಸಾಕಷ್ಟು ತಂಪಾಗಿರುವಾಗ ಅದು ದ್ರವವಾಗುತ್ತದೆ. ಇದು ಸಾಗಿಸಲು ಮತ್ತು ಎಂಜಿನ್ ನೊಂದಿಗೆ ಕೆಲಸ ಮಾಡಲು ಸುಲಭವಾಗುವುದರೊಂದಿಗೆ ಸಹಕರಿಸುವುದು ಸ್ಪಷ್ಟವಾಗಿದೆ. ಹೀಗಾಗಿ ಕಂಪನಿಯು ತನ್ನ ಟಿ7 ಇಂಜಿನ್‌ನ್ನು ಟರ್ಬೊ ಸಿಸ್ಟಮ್ ನೊಂದಿಗೆ ಸಜ್ಜುಗೊಳಿಸಿ ಮಿಥೇನ್‌ಗಾಗಿ ಸೂಕ್ಷ್ಮವಾಗಿ ಟ್ಯೂನ್ ಮಾಡಿದೆ. ಹೀಗಾಗಿ ಈ ಟಿ7 ಟ್ರ್ಯಾಕ್ಟರ್ ಹೊಂದಿರುವ ಯಾವುದೇ ಒಬ್ಬ ರೈತ, ಬೆನ್ನಿಮನ್ ಡೈಜೆಸ್ಟರ್ ಮೂಲಕ ಗ್ಯಾಸ್ ಸ್ಟೇಷನ್‌ನಲ್ಲಿ ಕಾರಿಗೆ ಅನಿಲವನ್ನು ತುಂಬುವಂತೆ



ತನ್ನ ಟ್ರ್ಯಾಕ್ಟರ್‌ಗೆ ಅನಿಲವನ್ನು ತುಂಬಿಸಿಕೊಳ್ಳಬಹುದು.

ಈ ಟ್ರ್ಯಾಕ್ಟರ್‌ನಿಂದ ಇಂಗಾಲದ ಡೈ ಆಕ್ಸೈಡ್ ಹೊರಸೂಸುವಿಕೆಯನ್ನು ವರ್ಷಕ್ಕೆ 2,500 ರಿಂದ 500 ಟನ್‌ಗಳಿಗೆ ಕಡಿತ ಮಾಡಬಹುದು ಎಂದು ಅಂದಾಜಿಸಲಾಗಿದೆ. ಇದರ ಕಾರ್ಯಕ್ಷಮತೆ ಯಾವುದೇ ಡೀಸೆಲ್ ಚಾಲಿತ ಟ್ರ್ಯಾಕ್ಟರ್‌ನ ಕಾರ್ಯಕ್ಷಮತೆಗೆ ಸರಿಯಾದುದಾಗಿದ್ದು, ಅದಕ್ಕೆ ಸಡ್ಡು ಹೊಡೆಯಬಲ್ಲಷ್ಟು ಶಕ್ತಿಯುತವೂ ಆಗಿದೆ. ಇದು 49 ಗ್ಯಾಲನ್ ಇಂಧನ ಟ್ಯಾಂಕ್‌ನ್ನು ಹೊಂದಿದ್ದು ಇಂಧನ ತುಂಬಲು ಕೇವಲ 10 ನಿಮಿಷ ಸಾಕಾಗುತ್ತದೆ. ಡೀಸೆಲ್ ಟ್ರ್ಯಾಕ್ಟರ್‌ಗಳಿಗೆ ಹೋಲಿಸಿದಲ್ಲಿ ಶೇಕಡಾ 62ರಷ್ಟು ಕಡಿಮೆ ನೈಟ್ರಸ್ ಆಕ್ಸೈಡ್ ಮತ್ತು ಶೇಕಡಾ 15ರಷ್ಟು ಕಡಿಮೆ ಇಂಗಾಲದ ಡೈ ಆಕ್ಸೈಡ್‌ನ್ನು ಹೊರಹಾಕುತ್ತದೆ. ಒಂದು ಅಂದಾಜಿನಂತೆ ಸುಮಾರು 75 ಹಸುಗಳ ಸಗಣಿ ಗೊಬ್ಬರದಿಂದ ದೊರೆಯುವ ಮಿಥೇನ್ ಇದಕ್ಕೆ ಸಾಕಾಗುತ್ತದೆಯಂತ.

ಈಟ್ರ್ಯಾಕ್ಟರ್‌ನ್ನು ಕಾರ್ನಿಷ್ ಕಂಪನಿಯಾದ ಬೆನ್ನಿಮನ್ ಅಭಿವೃದ್ಧಿಪಡಿಸಿದೆ. ಈ ಕಂಪನಿ ದಶಕಗಳಿಂದ ಬಯೋಮಿಥೇನ್ ಉತ್ಪನ್ನಗಳನ್ನು ಸಂಶೋಧಿಸುತ್ತಿದೆ ಮತ್ತು ಅಭಿವೃದ್ಧಿಪಡಿಸುವಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದೆ. ಬೆನ್ನಿಮನ್ ಸಹ ಸಂಸ್ಥಾಪಕರಾದ ಕ್ರಿಸ್‌ಮಾನ್ ಹೇಳುವಂತೆ, ಈ ದ್ರವ ಮಿಥೇನ್ ಇಂಧನದ ಟ್ರ್ಯಾಕ್ಟರ್ ನಿಜವಾದ ವಿಶ್ವದ ಮೊದಲ ಮತ್ತು ಜಾಗತಿಕ ಕೃಷಿ ಉದ್ಯಮವನ್ನು ಕಾರ್ಬನ್‌ರಹಿತ ಮಾಡುವ ಮತ್ತು ಭೌಗೋಳಿಕ ಆರ್ಥಿಕತೆಯನ್ನು ಸಾಕಾರಗೊಳಿಸುವತ್ತ ಮೈಲಿಗಲ್ಲಾಗಿದೆಯಂತೆ.

ಕೃಷಿ ಕಂಪನಿಯಾದ ಸಿಎನ್‌ಹೆಚ್‌ಐ ಇಂಡಸ್ಟ್ರಿಯಲ್ ಈ ಹಸಿರು ಶಕ್ತಿ ಟ್ರ್ಯಾಕ್ಟರ್‌ನ್ನು ರಚಿಸಲು ಮಿಥೇನ್ ಶಕ್ತಿ ಉತ್ಪನ್ನಗಳಲ್ಲಿ ಪರಿಣತಿ ಹೊಂದಿರುವ ಬೆನ್ನಿಮನ್‌ನೊಂದಿಗೆ ಪಾಲುದಾರಿಕೆಯನ್ನು ಹೊಂದಿದೆ. ಈ ಟ್ರ್ಯಾಕ್ಟರ್‌ನ ಆವಿಷ್ಕಾರ ಕೇವಲ ಇಂಧನಕ್ಕೆ ಪರ್ಯಾಯವಷ್ಟೇ ಆಗಿರದೆ ವಾತಾವರಣಕ್ಕೆ ಮಿಥೇನ್‌ನ್ನು ಬಿಡದಂತೆ ನಿಗ್ರಹಿಸುವುದೇ ಆಗಿದೆ. ಹೀಗಾಗಿ ಸಿಎನ್‌ಹೆಚ್‌ಗೆ ಈ ಮಿಥೇನ್‌ನ್ನು ವಾತಾವರಣಕ್ಕೆ ಬಿಡದಂತೆ ಹಿಡಿದಿಟ್ಟುಕೊಳ್ಳುವ ತಂತ್ರಜ್ಞಾನ ಅವಶ್ಯಕವಿತ್ತು. ಅದನ್ನು ಬೆನ್ನಿಮನ್ ಎಂಬ ಸ್ಟಾರ್ಟ್‌ಅಪ್ ಕಂಪನಿ ಸಾಕಾರಗೊಳಿಸಿದೆ. ಹೀಗಾಗಿ ಸಿಎನ್‌ಹೆಚ್ ಆ ಕಂಪನಿಯಲ್ಲಿ ನಿಯಂತ್ರಣದ ಪಾಲನ್ನು ಖರೀದಿಸಿದ್ದು, ಇದು ಒಂದು ಶತಕೋಟಿ ವ್ಯವಹಾರವನ್ನು ನಡೆಸಲಿದೆ ಎಂದೇ ಅಂದಾಜಿಸಲಾಗಿದೆ. ಈ ಹೊಸ ಇಂಧನ ತಂತ್ರಜ್ಞಾನವು ರೈತರಿಗೆ ಜಾನುವಾರುಗಳಿಂದ ಸಿಗುವ ತ್ಯಾಜ್ಯ ಉತ್ಪನ್ನಗಳಿಂದ ಹಣಗಳಿಸುವ ಹೊಸ ಅವಕಾಶಗಳನ್ನು ಸೃಷ್ಟಿಸಿದೆ ಎಂದೇ ಹೇಳಲಾಗಿದೆ. ಇದರ ಹೊರತಾಗಿಯೂ ಇದು ಶೇಕಡಾ 100ರಷ್ಟು ನೈಸರ್ಗಿಕ ರಸಗೊಬ್ಬರಗಳನ್ನು ಬಳಸಲು ಮತ್ತು ಹೆಚ್ಚುವರಿ ಮಿಥೇನ್‌ನ್ನು ವಿದ್ಯುತ್ ಆಗಿ ಪರಿವರ್ತಿಸಲು ಸಹಾಯಕವಾಗಿದೆ. ಹೀಗಾಗಿ ಇದನ್ನು ದೂರದ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಜಮೀನುಗಳಿಗೆ ವಿದ್ಯುತ್ ತಯಾರಿಸಲು ಬಳಸಬಹುದಾಗಿದೆ.

ಈ ಟ್ರ್ಯಾಕ್ಟರ್ ಇಂಗ್ಲೆಂಡ್‌ನ ಪ್ರಸಿದ್ಧ ಟ್ರೆನೆನ್ಸ್ ಫಾರ್ಮ್‌ನಲ್ಲಿ ನಿತ್ಯ ಸುಮಾರು 10 ಗಂಟೆಗಳ ಕಾಲ ಕೆಲಸ ಮಾಡುತ್ತಿದೆ. ಇದು ಉಳುಮೆಗೆ, ಎಳೆದುಕೊಂಡು ಹೋಗಲು, ಕತ್ತರಿಸಲು, ಪಶುಗಳಿಗೆ ಆಹಾರ ನೀಡಲು ಮತ್ತು ಬದ್ದ ಸಗಣಿಯನ್ನು ಒಂದೆಡೆ ಸಂಗ್ರಹಿಸುವುದು ಸೇರಿದಂತೆ ಸಾಕಷ್ಟು ಕೆಲಸಗಳನ್ನು ಮಾಡುತ್ತಿದೆ. ಹಿಂದೆ ಈ ಕೆಲಸಕ್ಕಾಗಿ ಫಾರ್ಮ್ ಸುಮಾರು 100 ಗ್ಯಾಲನ್ ಡೀಸೆಲ್‌ನ್ನು ಪ್ರತಿ ತಿಂಗಳು ಸುಡುತ್ತಿತ್ತು. ಇದು ಸುಮಾರು 1,080 ಕೆಜಿಯಷ್ಟು ಇಂಗಾಲದ ಹೊರಸೂಸುವಿಕೆಗೆ ಸಮವಾಗಿತ್ತು. ಅಷ್ಟೇ ಅಲ್ಲದೆ ಇಂಗ್ಲೆಂಡ್‌ನ ಪ್ರತಿ ಮೂರು ತಿಂಗಳಿಗೊಮ್ಮೆ ಪ್ರಯಾಣಿಕರ ಕಾರು ಉಗುಳುವ ಮಾಲಿನ್ಯಕ್ಕೆ ಇದು ಸಮವಾಗಿತ್ತು. ಹಾಗೆಯೇ ಫಾರ್ಮ್ ಹೆಚ್ಚಾಗಿ ದೊರೆಯುವ ಮಿಥೇನ್‌ನಿಂದ ಜನರೇಟರ್ ಮೂಲಕ ಸಂಪೂರ್ಣ ಫಾರ್ಮ್‌ನ ಲೈಟಿಂಗ್ ವ್ಯವಸ್ಥೆಯನ್ನು ಮಾಡಿಕೊಂಡಿದೆ. ಹಾಲು ಕರೆಯಲು ಬೇಕಾದ ಮಿಷನ್‌ಗಳು ಸಹ ಇದರಿಂದಲೇ ಕಾರ್ಯ ನಿರ್ವಹಿಸುತ್ತಿವೆ. ಹೀಗಾಗಿ ಇಲ್ಲಿಯ ವಾತಾವರಣದಲ್ಲಿ ಒಂದು ರೀತಿಯ ಉತ್ತಮ ಪರಿಮಳವು ಹರಡಿಕೊಂಡಿರುವುದನ್ನು ಗಮನಿಸಬಹುದಾಗಿದೆಯಂತೆ.

ಈ ಟ್ರ್ಯಾಕ್ಟರ್‌ನಿಂದಲೂ ಒಂದಷ್ಟು ದುಷ್ಪರಿಣಾಮಗಳಿರುವುದು ಹೊರ ನೋಟಕ್ಕೆ ಕಂಡುಬರುತ್ತಿದೆ. ಈ ಟ್ರ್ಯಾಕ್ಟರ್ ತಯಾರಿಕೆಗೆ ಸುಮಾರು 2,03,000 ಡಾಲರ್ ಖರ್ಚಾಗುತ್ತಿದೆ. ಇದು ಬೆಲೆಯಲ್ಲಿ ಒಂದು ಡೀಸೆಲ್ ಟ್ರ್ಯಾಕ್ಟರ್‌ಗಿಂತ ಸುಮಾರು ಶೇಕಡಾ 30ರಷ್ಟು ಹೆಚ್ಚಾಗಿದೆ. ಆದರೆ ಕಂಪನಿ ಹೇಳುವಂತೆ ಈ ಹಣ ಒಂದೇ ವರ್ಷದಲ್ಲಿ ಹಸುವಿನಿಂದ ದೊರೆಯುವ ಮಿಥೇನ್‌ನ್ನು ಸರಿಯಾದ ಪ್ರಮಾಣದಲ್ಲಿ ಬಳಸಿಕೊಂಡಿದ್ದೇ ಆದಲ್ಲಿ ಪಡೆಯಬಹುದಂತೆ. ಒಂದೊಮ್ಮೆ ಹೆಚ್ಚಾದ ಮಿಥೇನ್ ಲಭ್ಯವಿದ್ದಲ್ಲಿ ಗ್ರಾಹಕರು ಅದನ್ನು ಮಾರಾಟ ಮಾಡಬಹುದಂತೆ ಇಲ್ಲವೇ ಶೇಖರಿಸಿಡಬಹುದಂತೆ. ಹೀಗಾಗಿ ಕೆಲವು ಬೆನ್ನಿಮನ್ ಫಾರ್ಮ್‌ಗಳಲ್ಲಿ ಇಂದು ಹಾಲು ಮತ್ತು ಮಾಂಸಕ್ಕಿಂತ ಗೊಬ್ಬರವು ಹೆಚ್ಚು ಹಣವನ್ನು ಗಳಿಸುವ ಸಾಧನವಾಗಿ ಪರಿಣಮಿಸಿದೆ.

ಒಣ ಹುಲ್ಲುಪ್ರತಿ ಟನ್ 12 ಸಾವಿರ ರೂ.ಗೆ ಏರಿಕೆ | ಹಸಿ ಜೋಳದ ಕಡ್ಡಿ ದರವೂ ದುಬಾರಿ

ಜಾನುವಾರು ಮೇವಿನ ದರ ದುಪ್ಪಟ್ಟು ಏರಿಕೆ

■ ನಾಗರಾಜು ಅಶ್ವತ್ಥ್ ಬೆಂಗಳೂರು ಗ್ರಾ.
nagaraju.a@timesgroup.com

ರಾಜ್ಯದಲ್ಲಿ ಮಾನ್ಸೂನ್ ವಿಳಂಬ, ಬೇಸಿಗೆ ಹಿನ್ನೆಲೆಯಲ್ಲಿ ಜಾನುವಾರುಗಳಿಗೆ ಮೇವಿನ ದರ ದುಪ್ಪಟ್ಟಾಗಿದೆ.

ಭತ್ತದ ಹುಲ್ಲು, ರಾಗಿ ಹುಲ್ಲು ಸೇರಿದಂತೆ ಮೇವಿನ ಕೊರತೆ ಸೃಷ್ಟಿಯಾಗುತ್ತಿದ್ದು, ಚುನಾವಣಾ ನೆಪದಲ್ಲಿ ಇಲಾಖೆಗಳು ಇತ್ತ ಗಮನ ವಹಿಸುತ್ತಿಲ್ಲ. ಹಲವೆಡೆ ಮೇವು ಕೊರತೆ ಸೃಷ್ಟಿಯಾದ್ದರಿಂದ ದರಗಳು ಏರಿಕೆ ಕಂಡಿದ್ದು, ಪ್ರತಿ ಟನ್ ಭತ್ತದ ಹುಲ್ಲಿನ ದರ 8ರಿಂದ 8500ರಿಂದ, 10,000ರಿಂದ 12,000ಕ್ಕೆ ಏರಿಕೆ ಕಂಡಿದೆ. ಜತೆಗೆ, ಹಸಿ ಜೋಳದ ಕಡ್ಡಿ ದರವೂ ದುಪ್ಪಟ್ಟಾಗಿದೆ. ಒಣ ರಾಗಿ ಹುಲ್ಲಿಗೆ ಬೇಡಿಕೆಯಿದ್ದರೂ ಎಲ್ಲಿಂದಲೂ ಪೂರೈಕೆಯಾಗುತ್ತಿಲ್ಲ. ಹೀಗಾಗಿ ರೈತರು ಮೇವಿಗಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಸಾಮಾನ್ಯ ರೈತರ ಕಥೆ ಒಂದು ಕಡೆಯಾದರೆ ರಾಜ್ಯದ ಗೋಶಾಲೆಗಳಲ್ಲೂ ಮೇವಿನ ಕೊರತೆ, ನಿರ್ವಹಣೆ ತೀವ್ರವಾಗಿ ಕಾಡುತ್ತಿದೆ. ವಿಶೇಷವಾಗಿ ಗಂಡು ಕರುಗಳನ್ನು ದಾಖಲು ಮಾಡಿಕೊಂಡಿರುವ ಖಾಸಗಿ ಗೋಶಾಲೆಗಳ ಸ್ಥಿತಿ ತೀವ್ರ ತೊಂದರೆ ಸಿಲುಕಿದ್ದು, ಮೇವು ಖರೀದಿಗೆ ಹಣ ಹೊಂದಿಸುವ ಸವಾಲು ಎದುರಾಗಿದೆ. ಹೀಗಾಗಿ, ಇಲಾಖೆ ಅಧಿಕಾರಿಗಳು ಗೋಶಾಲೆಗಳೊಂದಿಗೆ ಸಾಮಾನ್ಯ ರೈತರ ಜಾನುವಾರುಗಳಿಗೆ ಮೇವು ಒದಗಿಸುವ ನಿಟ್ಟಿನಲ್ಲಿ ಪೂರಕ ಕ್ರಮ ಕೈಗೊಳ್ಳಬೇಕೆನ್ನುವ ಒತ್ತಾಯ ಕೇಳಿಬಂದಿದೆ.



ಎಷ್ಟೆಷ್ಟು ದರ ಏರಿಕೆ?

ಒಣಹುಲ್ಲಿನ ವಿಧ	ಹಿಂದಿನ ದರ	ಪ್ರಸ್ತುತ ದರ
ಭತ್ತದ ಹುಲ್ಲು	8,000-8,500	10,000-12,000
ಹಸಿ ಜೋಳದ ಹುಲ್ಲು	2,250-2,500	4,250-4,500
ರಾಗಿ ಹುಲ್ಲು	ಲಭ್ಯವಿಲ್ಲ	

ರಾಜ್ಯದಲ್ಲಿ ಎಲ್ಲೂ ಮೇವು ಕೊರತೆ ಇದೆ ಎಂಬ ದೂರು ಬಂದಿಲ್ಲ. ಒಂದು ವೇಳೆ ಕೊರತೆ ಸೃಷ್ಟಿಯಾದರೆ ಕ್ರಮ ಕೈಗೊಳ್ಳಲಾಗುತ್ತದೆ.
-ಮಂಜುನಾಥ್ ಪಾಳೇಗಾರ್ ನಿರ್ದೇಶಕ, ಪಶುಪಾಲನೆ ಮತ್ತು ವೈದ್ಯಕೀಯ ಸೇವಾ ಇಲಾಖೆ

ಸಾಮಾನ್ಯ ರೈತರ ಜತೆ ಗೋಶಾಲೆಗಳಿಗೂ ಮೇವಿನ ದರ ಏರಿಕೆ ಪರಿಣಾಮ ಗಂಭೀರವಾಗಿದ್ದು, ಪ್ರತಿ ಟನ್ ಒಣಮೇವು ದುಪ್ಪಟ್ಟಾಗಿದೆ.
-ಸಹನಾ ಸದಸ್ಯೆ, ಗ್ಯಾನ್ ಫೌಂಡೇಶನ್ ಗೋಶಾಲೆ, ಹುಬ್ಬಳ್ಳಿ

ಮಾರಾಟದಲ್ಲೂ ನಷ್ಟ: ರಾಜ್ಯದ ಪಶುಪಾಲನೆ ಅಧಿಕಾರಿಗಳು ಮೇವಿನ ಕೊರತೆಯಿಲ್ಲವೆಂಬ ಹಾರಿಕೆ ಉತ್ತರ ನೀಡಿ ಕೈಚೆಲ್ಲುತ್ತಿದ್ದಾರೆ. ನೈಜತೆ ತಿಳಿಯಬೇಕಾದರೆ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ವಾರದ ಸಂತೆಗೆ ಭೇಟಿ ನೀಡಬೇಕಿದೆ. ಎಲ್ಲಾ ಕಡೆ ಜಾನುವಾರುಗಳ ಮಾರಾಟದ ವಹಿವಾಟು ಗಮನಿಸಿದರೆ ತೀವ್ರ ಕುಸಿತ ಕಂಡುಬಂದಿದೆ. ರಾಜ್ಯದಲ್ಲಿ ಮೇವಿನ ಕೊರತೆಯಿಂದಾಗಿ ಜಾನುವಾರುಗಳು ನಿಶ್ಯಕ್ತಿ ಹೊಂದುತ್ತಿದ್ದು, ಅಧಿಕಾರಿಗಳು ಶೀಘ್ರ ಹಳ್ಳಿಗಳಲ್ಲಿ ಮೇವು ವ್ಯವಸ್ಥೆಗೆ ಕ್ರಮ ಕೈಗೊಳ್ಳಬೇಕಿದೆ ಎಂದು ರೈತಸಂಘದ ದಕ್ಷಿಣ ಭಾರತ ರಾಜ್ಯಗಳ ಸಂಚಾಲನಾ ಸಮಿತಿ ಅಧ್ಯಕ್ಷ ಕೆ.ಟಿ. ಗಂಗಾಧರ್ ತಿಳಿಸಿದ್ದಾರೆ.

06-06-2023
V-karanataka Pg 06

Prices of Tomato and Ginger Skyrocket Last Fortnight

Unseasonal rains hurt tomato crop in North; ginger farmers holding back their produce to recover losses from last year

Sutanuka.Ghosal@timesgroup.com

Kolkata: Prices of kitchen essentials like tomato and ginger have shot up in the last fortnight. While the recent unseasonal rains have affected the tomato crop in northern India, ginger farmers, on the other hand, are holding back their crop and allowing the prices to surge to recover the losses they had faced last year.

Meanwhile, the price of melon seeds (char magaz) has increased threefold as the armed conflict in Sudan, from where it is imported, has brought down the supply.

Retail tomato prices have increased to around ₹80 per kg from ₹40 a fortnight ago

"The price of a kg of char magaz is now ruling at ₹900, which was only ₹300 before the Sudan conflict," said Sanjay Sharma, a trader in Delhi.

Tomato prices in the retail market have increased to around ₹80 per kg from ₹40 a fortnight ago.

"Tomato supply to the Azadpur mandi (in Delhi) has dwindled as rains have damaged the crop. Prices will remain firm for some time now, till the new crop comes," said Ashok Kaushik, president of the Tomato Traders Association at Azadpur market.

There is a huge demand for tomatoes from southern India, which too is pushing up prices, Kaushik said. "Tomatoes are now coming from some parts of Haryana and UP. Prices are likely to remain firm for at least two months," he added.

Ginger prices, which were at ₹30 per 100 gms, have shot up to ₹40.

Shriram Gadhave, president of the All India Vegetable Growers Association, said: "Last year, the farmers suffered due to a lower price. This time they are offloading the crop carefully. Now that the prices have gone up, they will start offloading their crop in the market."

India's annual ginger production is around 2.12 million metric tonnes.



06-06-2023
Eco Times Pg 08